**CW : 8**

PW : 6

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.450/2024

ಸಾಕ್ಷಿದಾರರ ಹೆಸರು : ಸಮೀರ್

ತಂದೆಯ ಹೆಸರು : ಹಸೈನಾರ್

ಪ್ರಾಯ : 35 ವರ್ಷ

ಉದ್ಯೋಗ ಕೂಲಿ

ವಾಸಸ್ಥಳ : ಸುರುಳಿಮೂಲೆ ಮನೆ

ದಿನಾಂಕ:**12.05.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಸಾಕ್ಷಿಗೆ ನಿಪಿ.2 ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ನಿಪಿ.2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2ಬಿ ಎಂದು ಗುರುತಿಸಲಾಯಿತು. ನಿಪಿ.2ಕ್ಕೆ ನಾನು ದಿ.09.01.2024 ರಂದು ಸುರುಳಿಮೂಲೆಯಲ್ಲಿನ ನಾಸಿರ್ ಎನ್ನುವವರ ಮನೆಯ ಹಾಲ್ ನಲ್ಲಿ ಸಹಿ ಮಾಡಿದ್ದೇನೆ.

ಅಲ್ಲಿ ಪೋಲಿಸರು ಮಹಜರ ಮಾಡಲು ಬಂದಿದ್ದರು. ಸ್ಥಳದಲ್ಲಿ ಪೋಲಿಸರು ಕಬ್ಬಿಣದ ರಾಡ್ ಹಾಗೂ ಕಿಟಕಿ ಗಾಜಿನ ಚೂರನ್ನು ತಮ್ಮ ವಶ ಪಡೆದರು. ನನ್ನ ಸಂಗಡ ನಿಪಿ2 ಕ್ಕೆ ಅಬ್ದುಲ್ ಖಾದರ ಕೂಡ ಸಹಿ ಮಾಡಿದ್ದಾರೆ. ಕಬ್ಬಿಣದ ರಾಡ್ ಮತ್ತು ಕಿಟಕಿಯ ಗಾಜಿನ ಚೂರುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವ ಕಬ್ಬಿಣದ ರಾಡ್ ಹಾಗೂ ಕಿಟಕಿಯ ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ಬೆ.7.30 ಗಂಟೆಗೆ ಕೆಲಸಕ್ಕೆ ಹೋಗುತ್ತೇನೆ. ಸಂಜೆ ಬರುವಾಗ 8.00 ಗಂಟೆ ಆಗುತ್ತದೆ. ಗಲಾಟೆ ಆದ ನಂತರ ಪೋಲಿಸರು ನನಗೆ ನೋಟಿಸ ಕೊಟ್ಟಿದ್ದರು. 09.01.2024 ರಂದು ನೋಟಿಸ್ ಕೊಟ್ಟಿದ್ದರು. ನನಗೆ ನೋಟಿಸನ್ನು ಸಂ.7 ಗಂಟೆ ನಂತರ

ಕೊಟ್ಟಿದ್ದಾರೆ. ನಾನು ಸ್ಥಳಕ್ಕೆ 4.00 ಗಂಟೆಗೆ ಬಂದಿದ್ದೇನೆ. ನಾನು ಸಂಜೆ 6 ರವರೆಗೆ ಸ್ಥಳದಲ್ಲಿದ್ದೇನೆ. ನಾನು ಬರುವ ಮೊದಲೇ ಪೋಲಿಸರು ಸ್ಥಳದಲ್ಲಿರಲಿಲ್ಲ. ನನ್ನ ಸಮಕ್ಷಮ ಪೋಲಿಸರು ಪೋಟೊ ತೆಗೆದಿಲ್ಲ. ಮು ಮಾ 1 ಮತ್ತು 2 ನ್ನು ಪೋಲಿಸರು ಸ್ಥಳದಲ್ಲಿ ತಮ್ಮ ವಶ ಪಡೆದಿದ್ದಾರೆ. ಮು ಮಾ 1 ಮತ್ತು 2 ಮನೆಯಲ್ಲಿ ಯಾವ ದಿಕ್ಕಿನಲ್ಲಿ ಇತ್ತು ಎಂದು ಗೊತ್ತಿಲ್ಲ.

ಮಹಜರನಲ್ಲಿ ಪೋಲಿಸರು ಏನೆಲ್ಲಾ ಬರೆದಿದ್ದಾರೆ ಎಂದು ನೆನಪಿಲ್ಲ. ಮು ಮಾ 1 ಮತ್ತು 2ನ್ನು ಬಿಳಿ ಬಟ್ಟೆಯನ್ನು ಪೋಲಿಸರು ಪ್ಯಾಕ್ ಮಾಡಿದರು. ಯಾವ ಪೋಲಿಸರು ಎಂದು ಗೊತ್ತಿಲ್ಲ. ನಾನು ಠಾಣೆಗೆ ಹೋಗಿದ್ದೆನು. ಅಲ್ಲಿ ಎಷ್ಟು ಸಹಿ ಮಾಡಿದ್ದೇನು ಎಂದರೆ ನೆನಪಿಲ್ಲ. ಪೋಲಿಸರು ಮಹಜರ ಮಾಡಲು ಸ್ಥಳಕ್ಕೆ ಬಂದಿದ್ದರು ಹಾಗೂ ಮು ಮಾ 1 ಮತ್ತು 2 ನ್ನು ಸ್ಥಳದಿಂದ ಜಪ್ತುಪಡಿಸಿಕೊಂಡು ತಂದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 09.01.2024 ರಂದು ಠಾಣೆಗೆ ಹೋಗಿ 7 ರ ನಂತರ ಹೋಗಿ ಮಹಜರಿಗೆ ಸಹಿ ಮಾಡಿದ್ದೇನೆ ಎಂದ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.